

بِسۡمِ اللّٰہِ الرَّحۡمٰنِ الرَّحِیۡمِ

# ದುರ್ಘಟನೆಯಲ್ಲಿ ಮೃತಪಟ್ಟ ಯು.ಕೆ. ಜಾಮಿಅದ ವಿದ್ಯಾರ್ಥಿ ರಝಾ ಸಲೀಮ್ ಸಾಹೇಬ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16–09–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ಲೋಕಕ್ಕೆ ಆಗಮಿಸುವ ಪ್ರತಿಯೊಬ್ಬ ಮನುಷ್ಯ ಒಂದು ದಿನ ಇಲ್ಲಿಂದ ಬಿಟ್ಟು ಹೋಗಲೇ ಬೇಕು. ಯಾವುದೇ ವಸ್ತುವಿಗೆ ಸಹ ಶಾಶ್ವತ ಜೀವಿತವಿರುವುದಿಲ್ಲ. ಕೆಲವರು ಅತ್ಯಂತ ಬಾಲ್ಯಕಾಲದಲ್ಲಿಯೇ ಅಲ್ಲಾಹನ ಬಳಿಗೆ ಹೋಗಿಬಿಡುತ್ತಾರೆ. ಕೆಲವರು ಹೆಚ್ಚು ವಯಸ್ಸಿನವರಾದಾಗ ಮತ್ತು ಕೆಲವರು ತಮ್ಮ ಆಯುಸ್ಸಿನ ಅತ್ಯಂತ ಹೆಚ್ಚಾದ ಭಾಗಕ್ಕೆ ತಲಪಿದಾಗ ಇಹಲೋಕ ಬಿಟ್ಟು ಹೋಗುತ್ತಾರೆ. ಕೆಲವು ವ್ಯಕ್ತಿಗಳು ಹೇಗಿರುತ್ತಾರೆಂದರೆ ಅವರು ಇಹಲೋಕ ಬಿಟ್ಟುಹೋಗುವಾಗ ದುಃಖಿಸುವವರ ವಲಯ ವಿಶಾಲವಾಗಿರುತ್ತದೆ. ಅಂತಹ ಒಬ್ಬ ಮೆಚ್ಚಿಗೆಗೆ ಪಾತ್ರನಾದ ವ್ಯಕ್ತಿ ತರುಣನಾಗಿರುವಾಗಲೇ ಅಚಾನಕವಾಗಿ ಇಹಲೋಕ ಬಿಟ್ಟು ಹೋದರೆ, ಆಗ ದುಃಖ ಬಹಳ ಹೆಚ್ಚಿಗೆ ಇರುತ್ತದೆ. ಆದರೆ ಪ್ರತಿಯೊಂದು ಕಷ್ಟ, ದುಃಖ, ನಷ್ಟ, ಖೇದ ಮೊದಲಾದ ಸಂದರ್ಭಗಳಲ್ಲಿ ಅಲ್ಲಾಹನ ಇಚ್ಛೆಯ ಬಗ್ಗೆ ಸಮ್ಮತಿ ಸೂಚಿಸುತ್ತಾ **ಇನ್ನಾ ಲಿಲ್ಲಾಹಿ ವಇನ್ನಾಇಲ್ಯೆಹಿ ರಾಜಿಊನ್** ಎಂದು ಪ್ರಾರ್ಥಿಸಲು ಅಲ್ಲಾಹನು ನಮಗೆ ಕಲಿಸಿದ್ದಾನೆ. ನಾವು ಅಲ್ಲಾಹನಿಗೆ ಸೇರಿದವರಾಗಿದ್ದೇವೆ. ಅವನ ಕಡೆಗೆಯೇ ನಾವು ಮರಳುವವರಾಗಿದ್ದೇವೆ. ಈ ಲೋಕವನ್ನು ಬಿಟ್ಟು ಹೋಗುವವರ ಸಂಬಂಧಿಕರು ಅತ್ಯಂತ ಸಹನೆದೋರಿ ಈ ಪ್ರಾರ್ಥನೆ ಮಾಡುವಾಗ ಅಲ್ಲಾಹನು ಮೃತರ ಆಧ್ಯಾತ್ಮಿಕ ಪದವಿ ಉನ್ನತಗೊಳಿಸುತ್ತಾನಲ್ಲದೆ ಇಲ್ಲಿ ಇರುವವರು ಸಮಾಧಾನ ಹೊಂದುವ ವ್ಯವಸ್ಥೆ ಸಹ ಮಾಡುತ್ತಾನೆ. ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಯಾಗಿದ್ದ ಒಬ್ಬ ಪ್ರಿಯ ವ್ಯಕ್ತಿ ಇಪ್ಪತ್ತಮೂರನೆಯ ವಯಸ್ಸಿನಲ್ಲಿ ಒಂದು ದುರ್ಘಟನೆಯ ಪರಿಣಾಮವಾಗಿ ಮೃತರಾದರು– **ಇನ್ನಾ ಲಿಲ್ಲಾಹಿ ವಇನ್ನಾಇಲ್ಯೆಹಿ ರಾಜಿಊನ್.** ಒಬ್ಬ ಬಂದು ನನ್ನೊಂದಿಗೆ ಹೀಗೆ ಹೇಳಿದರು. ಈ ದುರ್ಘಟನೆಯ ಸಮಾಚಾರ ದೊರಕಿದ ಎರಡು ಗಂಟೆಯೊಳಗೆ ಅವರ ಒಬ್ಬ ಸ್ನೇಹಿತ ತನ್ನ ಪತ್ನಿಯೊಂದಿಗೆ ಮೃತರ ತಂದೆ ತಾಯಿ ಬಳಿಗೆ ಸಂತಾಪ ಸೂಚಿಸಲು ಹೋದಾಗ, ಮೃತರ ತಾಯಿ ಹೇಳಿದರು: ಅವನು ನನ್ನ ಪ್ರಿಯ ಪುತ್ರನಾಗಿದ್ದನು. ಆದರೆ ಅವನನ್ನು ಕರೆದುಕೊಂಡು ಹೋದವನು ಅವನಿಗಿಂತ ಹೆಚ್ಚು ಪ್ರಿಯನಾಗಿದ್ದಾನೆ. ಈ ಮಾತನ್ನು ಆಲಿಸಿದಾಗ ನನ್ನ ಸ್ನೇಹಿತರ ಪತ್ನಿಯೂ ಆಶ್ಚರ್ಯ ಚಕಿತಳಾದಳು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಸತ್ಯವಿಶ್ವಾಸದ ಉನ್ನತ ಮಟ್ಟ ಆ ರೀತಿ ಇರುತ್ತದೆ. ಯಾವುದೇ ಗೋಳಾಟ ಚೀರಾಟ ಇರುವುದಿಲ್ಲ. ಆದರೆ ದುಃಖ ನಿಶ್ಚಯವಾಗಿಯೂ ಆಗುತ್ತದೆ. ಮನುಷ್ಯರು ಅಳುತ್ತಾರೆ. ದುಃಖದ ಅತ್ಯಂತ ಹೆಚ್ಚಿನ ಸ್ಥಿತಿ ಇರುತ್ತದೆ. ಯುವ ಪುತ್ರನ ನಿಧನದಿಂದ ತಾಯಿಗಿಂತ ಹೆಚ್ಚು ಯಾತನೆ ಅನುಭವಿಸುವವರು ಯಾರಿರುತ್ತಾರೆ? ತನ್ನ ಪುತ್ರನ ಅಗಲುವಿಕೆಯ ದುಃಖವನ್ನು ತಂದೆಗಿಂತ ಹೆಚ್ಚು ಅನುಭವಿಸುವವರು ಯಾರಿರುತ್ತಾರೆ? ಮೃತರ ಪಿತನ ಬಗ್ಗೆ ನನಗೆ ಹೀಗೆ ತಿಳಿಸಲಾಗಿದೆ: ದುರ್ಘಟನೆಯ ಸಮಾಚಾರ ತಿಳಿದ ಕೂಡಲೆ ಅವರು ಅತ್ಯಂತ ದುಃಖಿತರಾಗಿದ್ದರು. ಆದರೆ ತನ್ನ ಪುತ್ರ ಮೃತನಾದನೆಂದು ಅರಿತ ಕೂಡಲೆ **ಇನ್ನಾ ಲಿಲ್ಲಾಹಿ ವಇನ್ನಾಇಲ್ಯೆಹಿ ರಾಜಿಊನ್** ಎಂದು ಪ್ರಾರ್ಥಿಸಿ ಸಮಾಧಾನಪಟ್ಟುಕೊಂಡರು.

ಸತ್ಯವಿಶ್ವಾಸಿಗಳ ಸ್ವಭಾವ ವೈಭವ ಹೀಗೆಯೇ ಇರುತ್ತದೆ. ತಮ್ಮ ಮಗನ ಅಚಾನಕ ಮೃತ್ಯುವನ್ನು ಬೇಗನೆ ಮರೆತು ಬಿಡಲು ಸಾಧ್ಯವಾಗಲಾರದು. ಆದರೆ ಒಬ್ಬ ಸತ್ಯವಿಶ್ವಾಸಿ ತನ್ನ ನೋವನ್ನು ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಿ ನಿವೇದಿಸುತ್ತಾನೆ. ಅವನು ಅಳುತ್ತಾನೆ. ಅದರೊಂದಿಗೆ ಮಾನಸಿಕ ನೆಮ್ಮದಿಯ ಬಗ್ಗೆ ಮತ್ತು ಮೃತನ ಆಧ್ಯಾತ್ಮಿಕ ಪದವಿಯ ಉನ್ನತಿಯ ಬಗ್ಗೆ ಪ್ರಾರ್ಥಿಸುತ್ತಲೂ ಇರುತ್ತಾನೆ. ನಾನು ಜರ್ಮನಿಯ ಪ್ರವಾಸದಲ್ಲಿದ್ದೆ. ನಾನು ಮರಳಿ ಬರುವ ದಿನ ಹೊರಡುವ ಮೊದಲೇ ನನಗೆ ದುರ್ಘಟನೆಯ ಸಮಾಚಾರ ದೊರಕಿತು. ಅನಂತರ ಪ್ರಯಾಣ ಮಧ್ಯೆ ಮರಣದ ಬಗ್ಗೆಯೂ ತಿಳಿಯಿತು. ಆ ಪ್ರಿಯ ಯುವಕನ ಮುಖ ಚಹರೆ ಮತ್ತೆ ಮತ್ತೆ ನನ್ನ ಮುಂದೆ ಬರುತ್ತಾ ಇತ್ತು. ನಾನು ಅವನಿಗೋಸ್ಕರ ಪ್ರಾರ್ಥಿಸುತ್ತಾ ಇದ್ದೆ. ಅವನು ಬಹಳ ಪ್ರಿಯ ವಿದ್ಯಾರ್ಥಿಯಾಗಿದ್ದನು. ಯು.ಕೆ.ಯ ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಗಳು ನನ್ನನ್ನು ಆಗಾಗ ಭೇಟಿಯಾಗುತ್ತಾ ಇರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೊಂದಿಗೆ ವೈಯಕ್ತಿಕ ಪರಿಚಯ ಮತ್ತು ಸಂಬಂಧವಿರುತ್ತದೆ. ಅವರು ನನ್ನನ್ನು ಭೇಟಿಯಾಗುವಾಗ ಕೆಲವೊಮ್ಮೆ ಪ್ರಶ್ನೋತ್ತರ ಕಾರ್ಯಕ್ರಮ ಸಹ ಇರುತ್ತದೆ. ಆ ವಿದ್ಯಾರ್ಥಿ ನನ್ನನ್ನು ಕೊನೆಯ ಬಾರಿ ಭೇಟಿಯಾದಾಗ ಒಂದು ಪ್ರಶ್ನೆ ಕೇಳಿದುದಕ್ಕೆ ನಾನು ಸಾಕಷ್ಟು ದೀರ್ಘ ಉತ್ತರ ನೀಡಿದ್ದೆ. ಆ ವಿದ್ಯಾರ್ಥಿಯ ತಂದೆಯವರು ಅದರ ಬಗ್ಗೆ ನನ್ನೊಂದಿಗೆ ಹೇಳಿದಾಗ ನನಗೆ ನೆನಪಿಗೆ ಬಂತು. ಅವರು ಹೇಳಿದರು ಆ ಪ್ರಶ್ನೆಗೆ ಉತ್ತರ ಆಲಿಸಿದ ನಂತರ ನನ್ನ ಪುತ್ರ ರಝಾ ಬಹಳ ಸಂತೋಷಗೊಂಡಿದ್ದನು. ತನ್ನ ಪ್ರಶ್ನೆಗೆ ಅಂದಾಜು ಹದಿನೈದು ಹದಿನಾರು ನಿಮಿಷಗಳ ಕಾಲ ಸವಿವರವಾಗಿ ಉತ್ತರ ಲಭಿಸಿತೆಂದು ಅವನು ಹೇಳಿದ್ದನು. ಅವನ ಕಣ್ಣುಗಳಲ್ಲಿ ಯಾವಾಗಲೂ ಖಿಲಾಫತ್ ಬಗ್ಗೆ ಒಂದು ವಿಶಿಷ್ಟ ಪ್ರೀತಿ ಮತ್ತು ಹೊಳಪು ಕಂಡು ಬರುತ್ತಿತ್ತು. ಈ ವಿದ್ಯಾರ್ಥಿ ಜಾಮಿಅದಲ್ಲಿ ಪ್ರವೇಶಿಸಿದಾಗ ನಾನು ಯೋಚಿಸಿದೆ ಆಟೋಟಗಳಲ್ಲಿ ಹೆಚ್ಚು ಆಸಕ್ತಿ ಇರಬಹುದು ಎಂದು. ಆದರೆ ನನ್ನ ಅಂದಾಜು ತಪ್ಪಾಗಿತ್ತು. ಅವನು ವಿದ್ಯಾಭ್ಯಾಸ ಮಾಡುವುದರಲ್ಲಿಯೂ ಚುರುಕಾಗಿದ್ದನು. ನಿಶ್ಚಯವಾಗಿಯೂ ಅವನಿಗೆ ಆಟಗಳ ಬಗ್ಗೆ ಸಹ ಆಸಕ್ತಿ ಇತ್ತು. ಅದರೊಂದಿಗೆ ನಿಷ್ಠೆ ಮತ್ತು ಅನುಸರಣೆಯಲ್ಲಿ ವರ್ಧಿಸಿದವನಾಗಿದ್ದನು.

ಖಿಲಾಫತ್ ಮತ್ತು ಧರ್ಮದ ರಕ್ಷಣೆಗೋಸ್ಕರ ಒಂದು ನಗ್ನ ಖಡ್ಗ ಆಗಬೇಕೆಂದು ಅವನು ಬಯಸಿದ್ದನು. ಅವನ ಕೆಲವು ಸ್ನೇಹಿತರು ಬರೆದ ಪ್ರಕಾರ ಅವನು ಹಾಗೆ ವರ್ತಿಸಿದ್ದನು. ಅವನ ಸಹಪಾಠಿಗಳು, ಸ್ನೇಹಿತರು, ಜಾಮಿಅದ ಇತರ ವಿದ್ಯಾರ್ಥಿಗಳು, ಸಹೋದರ ಸಹೋದರಿಯರು ಅವನ ಬಗ್ಗೆ ನನಗೆ ಬರೆದಿರುವರು. ಎಲ್ಲರೂ ಬರೆದ ವಿಷಯ ಅವನ ಉತ್ತಮ ಸ್ವಭಾವ ಗುಣಗಳು, ಧರ್ಮದ ಬಗ್ಗೆ ಅಭಿಮಾನ, ಖಿಲಾಫತ್‌ನೊಂದಿಗೆ ಸಂಬಂಧ ಮತ್ತು ಪ್ರೀತಿ, ಅತಿಥಿ ಸತ್ಕಾರದ ಬಗ್ಗೆ ಕಾಳಜಿ, ಅನ್ಯರ ಭಾವನೆಗಳ ಬಗ್ಗೆ ಗೌರವ ಮೊದಲಾದವುಗಳ ಬಗ್ಗೆಯಾಗಿವೆ. ಇಂತಹ ಜನರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ, ಸ್ವರ್ಗಕ್ಕೆ ಅರ್ಹರಾದ ಜನರಲ್ಲಿ ಅವರು ಸೇರುತ್ತಾರೆಂದು. ಅಂತಹವರನ್ನು ಎಲ್ಲ ಜನರು ಹೊಗಳುತ್ತಾರೆ. ಈ ಹುಡುಗ ಧರ್ಮದ ಸೇವೆಗೋಸ್ಕರ ವಿಶಿಷ್ಟ ಉತ್ಸಾಹ ಹೊಂದಿದ್ದನು. ಅವನು ಆಟಗಳಲ್ಲೂ ಹೈಕಿಂಗ್ ಮೊದಲಾದವುಗಳಲ್ಲಿಯೂ ಭಾಗವಹಿಸುತ್ತಿದ್ದನು. ಅದು ಆರೋಗ್ಯಶಾಲಿ ಶರೀರ ಧಾರ್ಮಿಕ ಸೇವೆಗೆ ಆವಶ್ಯಕವಾಗಿದೆ ಎಂಬ ಉದ್ದೇಶದಿಂದಾಗಿತ್ತು. ಈ ವಿದ್ಯಾರ್ಥಿಯ ಬಗ್ಗೆ ಬರೆದು ತಿಳಿಸಿದವರು ಅವನ ಒಳಿತುಗಳ ಬಗ್ಗೆಯೇ ಬರೆದಿದ್ದಾರೆ.

ಮೃತನಾದ ಈ ಯುವಕನ ಹೆಸರು ರಝಾ ಸಲೀಂ ಎಂದು. ನಮ್ಮ ಪ್ರೈವೇಟ್ ಸೆಕ್ರಿಟರಿಯ ಕಛೇರಿಯ ಕಾರ್ಯಕರ್ತ ಸಲೀಮ್ ಝಫರ್ ಸಾಹೇಬರ ಪುತ್ರ. 10-9-2016ರಂದು ಇಟಲಿ ದೇಶದಲ್ಲಿ ಹೈಕಿಂಗ್ ಮಾಡುವಾಗ ಒಂದು ದುರ್ಘಟನೆಯಲ್ಲಿ ಮೃತರಾದರು. ಅವರು 1993 ಸೆಪ್ಟೆಂಬರ್ 27ರಂದು ಯು.ಕೆ.ಯ ಗಿಲ್‌ಫರ್ಡ್‌ನಲ್ಲಿ ಜನಿಸಿದರು. ಅವರು ವಕ್ಫ಼ೆ ನೌ ಪದ್ಧತಿಯಲ್ಲಿ ಸೇರಿದವರಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿದ್ದು ಅವರ ತಂದೆಯ ತಾತ ಇಲಾಹ್ ದೀನ್ ಸಾಹೇಬರ ಮುಖಾಂತರವಾಗಿತ್ತು. ಅವರು ಖಾದಿಯಾನಿನ ಸಮೀಪ ಒಂದು ಗ್ರಾಮದ ನಿವಾಸಿಯಾಗಿದ್ದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಮೂಲಕ ಬೈಅತ್ ಮಾಡಿದ್ದರು. ರಝಾ ಸಲೀಮ್ 2012ರಲ್ಲಿ ಯು.ಕೆ.ಯ ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶ ಗಳಿಸಿದರು. ಅವರು ಆ ಕುಟುಂಬದ ಪ್ರಥಮ ಮುರಬ್ಬಿ ಆಗುವವರಾಗಿದ್ದರು. ಅವರು ಮೂರನೆಯ ತರಗತಿಯಿಂದ ಉತ್ತೀರ್ಣರಾಗಿದ್ದರು. ನಾಲ್ಕನೆಯ ತರಗತಿಗೆ ಪ್ರವೇಶಿಸುವವರಾಗಿದ್ದರು. ಅವರು ಮೂಸಿ ಆಗಿದ್ದರು. ಅವರು ವಸಿಯ್ಯತ್ ಫಾರ್ಮ್ ಭರ್ತಿ ಮಾಡಿದ್ದರು ಮತ್ತು ಮುಂದಿನ ಕ್ರಮ ಜರಗಲಿತ್ತು. ಅವರ ವಸಿಯ್ಯತ್ ಅಂಗೀಕರಿಸಲಾಗಿದೆ ಎಂದು ನಾನು ವಸಿಯ್ಯತ್ ವಿಭಾಗಕ್ಕೆ ತಿಳಿಸಿದ್ದೇನೆ. ತಂದೆ ತಾಯಿ ಮತ್ತು ಇಬ್ಬರು ಸಹೋದರರು ಹಾಗೂ ಇಬ್ಬರು ಸಹೋದರಿಯರು ಅವರಿಗಿದ್ದಾರೆ.

ಸಲೀಮ್ ಝಫರ್ ಸಾಹಿಬ್ ಬರೆಯುತ್ತಾರೆ: ನನ್ನ ಪ್ರಿಯ ಪುತ್ರ ಅನೇಕ ಸದ್ಗುಣಗಳನ್ನು ಹೊಂದಿದ್ದನು. ಯಾವಾಗಲೂ ಸತ್ಯವನ್ನೇ ಹೇಳುತ್ತಿದ್ದನು. ಏನಾದರೂ ತಪ್ಪಾದರೆ ಸಹ ಅದನ್ನು ಮರೆ ಮಾಡುತ್ತಿರಲಿಲ್ಲ. ಅವನನ್ನು ಅದರ ಬಗ್ಗೆ ಟೀಕಿಸಿದರೆ ಕೂಡ ಅವನು ಅದನ್ನು ಗಮನಿಸುತ್ತಿರಲಿಲ್ಲ. ಅವನು ತನ್ನ ತಪ್ಪು ಒಪ್ಪಿಕೊಳ್ಳುತ್ತಿದ್ದನು. ಸತ್ಯವನ್ನು ಅವಲಂಬಿಸುವುದು ಅವನ ಸ್ವಭಾವವಾಗಿತ್ತು. ಅವನು ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದನು. ತನ್ನ ಸಹೋದರಿಯ ಮಕ್ಕಳನ್ನೂ ಬಹಳ ಪ್ರೀತಿಸುತ್ತಿದ್ದನು. ಆ ಸಹೋದರಿ ಮಕ್ಕಳಿಗೆ ಹೊಡೆಯುವಾಗ ಅವನಿಗೆ ಬಹಳ ದುಃಖವಾಗಿ ಅಳುತ್ತಿದ್ದನು. ಮಕ್ಕಳನ್ನು ಹೊಡೆದು ಸುಧಾರಣೆ ಮಾಡಲು ಸಾಧ್ಯವಿಲ್ಲ ಎಂದು ಅವನು ಹೇಳುತ್ತಿದ್ದನು. ಅವನು ಅನ್ಯರಿಗೆ ನೀಡುವುದರಲ್ಲಿ ಸಂತೋಷಪಡುತ್ತಿದ್ದನು. ಅವನಿಗೆ ತಿನ್ನಲು ಏನಾದರೂ ಕೊಟ್ಟರೆ ತನ್ನ ರೂಮ್‌ಮೇಟ್‌ಗಳಿಗೆ ಅದನ್ನು ಹಂಚಲು ಸಾಕಷ್ಟಿದ್ದರೆ ಮಾತ್ರ ತೆಗೆದುಕೊಂಡು ಹೋಗುತ್ತಿದ್ದನು. ಇಲ್ಲದಿದ್ದರೆ ಬಿಟ್ಟು ಹೋಗುತ್ತಿದ್ದನು. ನಾನು ಒಬ್ಬನೇ ತಿನ್ನಲಾರೆ ಎಂದು ಹೇಳುತ್ತಿದ್ದನು. ಅವನು ಕೆಲವು ಸಾರಿ ಸ್ನೇಹಿತರ ಬಟ್ಟೆ ಒಗೆಯಲು ಮತ್ತು ಇಸ್ತ್ರಿ ಮಾಡಲು ಮನೆಗೆ ತರುತ್ತಿದ್ದನು. ಸಹೋದರ ಸಹೋದರಿಯರೊಂದಿಗೆ ಬಹಳ ಪ್ರೀತಿಯ ಸಂಬಂಧ ಅವನಿಗಿತ್ತು. ಅವನು ಪೂರ್ಣ ಜವಾಬ್ದಾರಿಕೆಯಿಂದ ಪ್ರತಿಯೊಂದು ಕೆಲಸ ಮಾಡುತ್ತಿದ್ದನು. ಸೇವೆ ಮಾಡುತ್ತಿದ್ದನು. ಅವನು ತನ್ನ ಸ್ವಂತಕ್ಕಾಗಿ ನಿಶ್ಚಯವಾಗಿಯೂ ಕೈಯನ್ನು ತಡೆಯುತ್ತಿದ್ದನು. ಅವನು ದುಂದು ವೆಚ್ಚ ಮಾಡುತ್ತಿರಲಿಲ್ಲ. ಆದರೆ ಅನ್ಯರಿಗೋಸ್ಕರ ಬಹಳ ವಿಶಾಲವಾಗಿ ಕೈ ಹರಡುತ್ತಿದ್ದನು. ಅಲ್ಲಾಹನ ಅನುಗ್ರಹದಿಂದ ಈಗ ಅವನ ವಸಿಯ್ಯತ್ ಸಹ ಅಂಗೀಕಾರ ಗಳಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಿಲಾಫತ್ ಬಗ್ಗೆ ಬಹಳ ಪ್ರೀತಿ ಅವನಿಗಿತ್ತು. ಯಾರಾದರೂ ವಿರುದ್ಧ ಮಾತನಾಡಿದರೆ ಸುಮ್ಮನಿರುತ್ತಿರಲಿಲ್ಲ. ಅವನು ಬಹಳ ಸಹನೆ ತೋರುವವನಾಗಿದ್ದನು. ಅವನು ಎಂದೂ ಏನನ್ನೂ ಆವಶ್ಯಪಡುತ್ತಿರಲಿಲ್ಲ. ಆದುದರಿಂದ ನಾವೇ ಅವನ ಆವಶ್ಯಕತೆಗಳ ಬಗ್ಗೆ ಜಾಗರೂಕತೆ ವಹಿಸುತ್ತಿದ್ದೆವು. ಯು.ಕೆ.ಯ ಹೊರಗಿನಿಂದ ಬಂದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆ ಕಲಿಸಲು ಬಹಳ ಸಹಾಯ ಮಾಡುತ್ತಿದ್ದನು. ಅವನಲ್ಲಿ ಕೋಪವೆಂಬುದು ಇರಲೇ ಇಲ್ಲ. ಯಾವಾಗಲೂ ಮುಗುಳು ನಗುತ್ತಾ ಇದ್ದನು. ಅವನು ತಪ್ಪದೆ ನಮಾಝ್ ಅನುಷ್ಠಿಸುತ್ತಿದ್ದುದಾಗಿ ಎಲ್ಲರೂ ಬರೆದಿದ್ದಾರೆ.

ಅವನ ತಂದೆ ಬರೆಯುತ್ತಾರೆ: ರಝಾ ಸಲೀಮ್ ವಕ್ಫೇ ಆರ್‌ಝಿಗೋಸ್ಕರ ಮ್ಯಾಂಚೆಸ್ಟರ್‌ಗೆ ಹೋಗಿದ್ದನು. ಅಲ್ಲಿಂದ ಮರಳಿ ಬರುವ ದಿನ ಅವನ ಜೇಬಿಗೆ ಒಬ್ಬರು ಒಂದು ಲಕೋಟೆ ಹಾಕಿದರು. ಅದನ್ನು ತೆರೆದಾಗ ಅದರಲ್ಲಿ ಹಣವಿತ್ತು. ಆ ಹಣವನ್ನು ಅವರಿಗೆ ಮರಳಿ ಕೊಟ್ಟು ಕೃತಜ್ಞತೆ ಸೂಚಿಸಿ ಹೇಳಿದನು: ಅಂಕಲ್, ಈ ರೀತಿ ಹಣ ಪಡೆಯಲು ನಮಗೆ ಅನುಮತಿಯಿಲ್ಲ.

ಆ ವ್ಯಕ್ತಿ ಕೆಲವು ದಿನಗಳ ನಂತರ ನನಗೆ ಬರೆದರು: ಮುರಬ್ಬಿಯಾಗಲಿರುವ ಒಬ್ಬ ಬಾಲಕ ಇಲ್ಲಿಗೆ ಬಂದಿದ್ದನು. ಅವನು ನಮ್ಮನ್ನು ಆಶ್ಚರ್ಯ ಪಡುವಂತೆ ಮಾಡಿದ್ದಾನೆ. ಇಂತಹ ಮಕ್ಕಳು ಮುರಬ್ಬಿಗಳಾದರೆ ಜಮಾಅತಿನಲ್ಲಿ ನಿಶ್ಚಯವಾಗಿಯೂ ಆಧ್ಯಾತ್ಮಿಕ ಬದಲಾವಣೆ ಉಂಟಾಗುವುದು.

ಮೃತನ ತಾಯಿ ಬರೆಯುತ್ತಾರೆ: ನನ್ನ ಪುತ್ರ ತಂದೆ ತಾಯಂದಿರ ಮತ್ತು ಜಮಾಅತಿನ ಅನುಸರಣೆ ಮಾಡುವವನಾಗಿದ್ದನು. ಅವನ ಪ್ರೀತಿಯು ಅಪ್ರತಿಮವಾಗಿತ್ತು. ಅವನು ನಮ್ಮ ಬಗ್ಗೆ ಶ್ರದ್ಧೆ ನೀಡುವವನೂ ನಮ್ಮ ಮಾತನ್ನು

ಅನುಸರಿಸುವವನೂ ಆಗಿದ್ದನು. ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ಸಹ ಬಹಳ ಚೆನ್ನಾಗಿ ಮಾತನಾಡುತ್ತಿದ್ದನು. ಚಿಕ್ಕವರೊಂದಿಗೂ ದೊಡ್ಡವರೊಂದಿಗೂ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದನು. ಮನೆ ಕೆಲಸದಲ್ಲಿ ನನಗೆ ಸಹಾಯ ಮಾಡುತ್ತಿದ್ದನು. ನಿಮಗೆ ಆಯಾಸವಾಗಿದೆಯಾ, ನಾನು ಸಹಾಯ ಮಾಡಲೇ ಎಂದು ಆಗಾಗ ಕೇಳುತ್ತಿದ್ದನು. ನಾನು ಕಷ್ಟಪಡುವುದನ್ನು ಕಾಣಲು ಅವನು ಇಷ್ಟಪಡುತ್ತಿರಲಿಲ್ಲ. ನಿಮ್ಮ ಕಣ್ಣಲ್ಲಿ ಕಣ್ಣೀರು ಬರದಿರಲಿ ಎಂದು ಆಶ್ವಾಸನೆ ನೀಡುತ್ತಿದ್ದನು. ಜಾಮಿಅದಿಂದ ರಜೆಯಲ್ಲಿ ಬಂದಾಗ ಮನೆಯವರೆಲ್ಲರ ಬಗ್ಗೆ ವಿಚಾರಿಸುತ್ತಿದ್ದನು. ಅವನು ಚಿಕ್ಕವನಾಗಿರುವಾಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಇಸ್ಲಾಮಾಬಾದ್ ಸಂದರ್ಶನ ನೀಡುತ್ತಿದ್ದ ಸಂದರ್ಭಗಳಲ್ಲಿ ಅವನು ಶಾಲೆಯಿಂದ ಬಂದ ಕೂಡಲೆ ಅವರ ಬಳಿಗೆ ಓಡಿ ಹೋಗುತ್ತಿದ್ದನು. 'ಹುಝೂರರನ್ನು ಭೇಟಿಯಾಗಬೇಕು ಮತ್ತು ಅವರೊಂದಿಗೆ ಗಾಳಿ ಸಂಚಾರಕ್ಕೆ ಹೊರಡಬೇಕು' ಎಂದು ಹೇಳುತ್ತಿದ್ದನು. ಡಾಕ್ಟರ್ ನುಸ್ರತ್ ಜಹಾಂ ಸಾಹಿಬ ಎಂಬವರು ರಬ್ವದಿಂದ ಇಲ್ಲಿಗೆ ಬಂದು ವಾಸಿಸುತ್ತಿದ್ದಾರೆ. ಅವರು ಈಗ ರೋಗಿಯಾಗಿದ್ದಾರೆ – ಅಲ್ಲಾಹನು ಅವರಿಗೆ ರೋಗಶಮನ ನೀಡಲಿ – ಅವರ ಮನೆಯವರೊಂದಿಗೆ ನನ್ನ ಮಗನಿಗೆ ಬಹಳ ಸಂಬಂಧವಿತ್ತು. ಅವನು ಹೇಳುತ್ತಿದ್ದನು. ನಾನು ಅವರಿಗೋಸ್ಕರ ಪ್ರಾರ್ಥನೆ ಮಾಡುತ್ತೇನೆ ಎಂದು. ಅಲ್ಲಾಹನು ಅವರ ಬಗ್ಗೆ ಮಾಡಿದ ಅವನ ಪ್ರಾರ್ಥನೆಗಳನ್ನು ಅಂಗೀಕರಿಸಲಿ.

ಡಾಕ್ಟರ್ ಸುಸ್ರತ್ ಜಹಾನ್ ಹೇಳುತ್ತಾರೆ: ನನಗೆ ಜುಮುಅದ ರಾತ್ರಿ ಒಂದು ಕನಸು ಕಂಡಿತ್ತು. ನನ್ನ ಮನೆಗೆ ದೊಡ್ಡ ಜನರು ಬಂದಿದ್ದಾರೆ. ಚಿತ್ರ ತೆಗೆಯುತ್ತಿದ್ದಾರೆ. ನಾನು ಹೆದರಿ ಎಚ್ಚೆತ್ತು ನನ್ನ ಪತಿಯೊಂದಿಗೆ ಹೇಳಿದೆ– ನನಗೆ ಸ್ವಪ್ನ ಕಂಡು ಹೆದರಿಕೆ ಆಗಿದೆ. ಬೆಳಗ್ಗೆ ಎದ್ದ ಕೂಡಲೆ ಸದಖ ಕೊಡಿರಿ ಎಂದು ಹೇಳಿದೆ. 'ಕಚೇರಿಗೆ ಹೋದ ಕೂಡಲೆ ಸದಖ ಕೊಡುವೆನು' ಎಂದು ಅವರು ಹೇಳಿದರು. ಆದರೆ ಅದರ ಮೊದಲೇ ಈ ದುರ್ಘಟನೆಯ ಸಮಾಚಾರ ದೊರಕಿತು.

ಆತನ ತಾಯಿ ಹೇಳುತ್ತಾರೆ: ನಾನು ಯಾವುದಾದರೂ ಬಟ್ಟೆ ನನ್ನ ಪುತ್ರನಿಗೆ ಕೊಟ್ಟರೆ ಅವನು ಬಹಳ ಸಂತೋಷದಿಂದ ಬಳಸುತ್ತಿದ್ದನು. ಅದರ ಪ್ರಶಂಸೆ ಮಾಡುತ್ತಿದ್ದನು. ಅವನು ಅತಿಥಿ ಸತ್ಕಾರ ಬಹಳ ಮಾಡುತ್ತಿದ್ದನು. ಅವನಿಗೆ ಯಾರಾದರೂ ಸತ್ಕಾರ ನೀಡಿದ್ದರೆ ಅವನು ಅದನ್ನು ಮರೆತು ಬಿಡುತ್ತಿರಲಿಲ್ಲ. ಅವರು ಇಸ್ಲಾಮಾಬಾದಿಗೆ ಬಂದರೆ ಕೂಡಲೆ ಮನೆಗೆ ಬಂದು ಅವರಿಗೆ ಆಹಾರ ಸಿದ್ಧಪಡಿಸಲು ಮತ್ತು ಅವರನ್ನು ಮನೆಗೆ ಕರೆತರಲು ಹೇಳುತ್ತಿದ್ದನು. ನಿಝಾಮೆ ಜಮಾಅತ್ ನೀಡುವ ಚಿಕ್ಕ ಆಜ್ಞೆಯನ್ನೂ ಸಹ ಪಾಲಿಸಲು ಪ್ರಯತ್ನಿಸುತ್ತಿದ್ದನು. ಅವನು ಒಮ್ಮೆ ಹೇಳಿದನು: ಅಮ್ಮಾ ನಾನು ಬಹಳ ಒಳ್ಳೆಯ ಮುರಬ್ಬಿಯಾಗಬೇಕೆಂದು ಇಚ್ಛಿಸುತ್ತೇನೆ. ಜಮಾಅತಿನ ಬಹಳ ತಬ್ಲೀಗ್ ಮಾಡಬೇಕೆಂದು ನಾನು ಬಯಸುತ್ತೇನೆ. ನೀವು ನನ್ನ ಬಗ್ಗೆ ಅಭಿಮಾನಪಡುವ ಹಾಗೆ ಹೆಚ್ಚು ಜನರನ್ನು ಅಹ್ಮದಿಯರನ್ನಾಗಿ ಮಾಡಲು ನಾನು ಇಚ್ಛಿಸುತ್ತೇನೆ ಎಂದು ಹೇಳಿದ್ದನು.

ಮೃತನ ಸಹೋದರಿ ರಫೀಅ ಹೇಳುತ್ತಾರೆ: ನನ್ನ ಪ್ರಿಯ ಸಹೋದರ ಚಿಕ್ಕ ವಯಸ್ಸಿನವನಾಗಿದ್ದರೂ ಅವನ ಯೋಚನೆಗಳು ದೊಡ್ಡದಾಗಿದ್ದುವು. ಅವನು ಎಲ್ಲರ ಬಗ್ಗೆ ಲಕ್ಷ್ಯ ನೀಡುವವನಾಗಿದ್ದನು. ಅವನು ಪ್ರತಿಯೊಬ್ಬರೊಂದಿಗೆ ಅವರ ವಯಸ್ಸನ್ನು ಗಮನಿಸಿ ಮಾತನಾಡುತ್ತಿದ್ದನು. ಇದುವರೆಗೂ ಅವನು ಯಾರ ಹೃದಯವನ್ನೂ ನೋಯಿಸಲಿಲ್ಲ. ಅವನು ಜನರ ಮಾತುಗಳನ್ನು ಸಮಾಧಾನದಿಂದ ಆಲಿಸಿ ಗೌರವದೊಂದಿಗೆ ಉತ್ತರ ನೀಡುತ್ತಿದ್ದನು.

ಮೃತನ ಸಹೋದರ ಅಸದ್ ಸಲೀಮ್ ಹೇಳುತ್ತಾರೆ: ಆತನು ಬಹಳ ಸರಳ ಸ್ವಭಾವದವನಾಗಿದ್ದನು. ನೇರ ನುಡಿಯವನಾಗಿದ್ದನು. ನಾವು ಅವನಿಗೆ ಇತ್ತೀಚೆಗೆ ಒಂದು ಹೊಸ ಕಾರು ಖರೀದಿಸಿ ಕೊಟ್ಟೆವು. ಅವನು ಮೊತ್ತ ಮೊದಲು ಅದರ ಬೆಲೆಯ ಬಗ್ಗೆ ವಿಚಾರಿಸಿದನು. ಅವನು ಹೇಳಿದನು: ನಾನು ಮುರಬ್ಬಿಯಾಗಿ ಸರಳ ಜೀವನ ನಡೆಸಬೇಕಾಗಿದೆ. ಹೆಚ್ಚು ಬೆಲೆ ಬಾಳುವವುಗಳನ್ನು ನಾನು ತೆಗೆದುಕೊಳ್ಳಬಾರದು ಎಂದು ಹೇಳಿದನು.

ಮೃತನ ಸಹೋದರಿ ಅಮತುಲ್ ಹಫೀಝ ಸಾಹಿಬ ಬರೆಯುತ್ತಾರೆ: ಅವನು ಯಾರ ಬಗ್ಗೆಯೂ ಕೆಟ್ಟ ಮಾತು ಕೇಳಲು ಇಷ್ಟಪಡುತ್ತಿರಲಿಲ್ಲ. ಅವನು ಜನರ ನಕಾರಾತ್ಮಕ ತಪ್ಪು ಯೋಚನೆಗಳನ್ನು ಒಳ್ಳೆಯದಾಗಿ ಪರಿವರ್ತಿಸುತ್ತಿದ್ದನು. ನಾವು ಜನರ ಒಳಿತಿನ ಬಗ್ಗೆ ನೋಡಬೇಕು. ಅವರ ತಪ್ಪುಗಳ ಬಗ್ಗೆ ಮಾತನಾಡುವುದಕ್ಕೆ ಬದಲಾಗಿ ಅವರಿಗಾಗಿ ಪ್ರಾರ್ಥಿಸಬೇಕು ಎಂದು ಹೇಳುತ್ತಿದ್ದನು. ಅವನು ಬಹಳ ಸರಳ ಸ್ವಭಾವಿಯಾಗಿದ್ದನು. ತಾಯಿ ಈದ್‌ಗೆ ಬಟ್ಟೆ ಖರಿದಿಸಿಕೊಟ್ಟಾಗ ಅವನು ಅದನ್ನು ಧರಿಸಿ ಬಹಳ ಚಿಂತಿಸುತ್ತಿದ್ದನು. ಈ ಬಟ್ಟೆಗಳಲ್ಲಿ ಆವಶ್ಯಕತೆಗಿಂತ ಹೆಚ್ಚು ತೋರಿಕೆ ಇದೆಯೋ ಎಂದು. ಆದುದರಿಂದ ಅವನು ತನ್ನ ಹಳೆಯ ಜಾಕೆಟನ್ನು ಅದರ ಮೇಲೆ ಧರಿಸುತ್ತಿದ್ದನು.

ಜಾಮಿಅದ ಅಧ್ಯಾಪಕ ಖುದ್ದೂಸ್ ಸಾಹಿಬ್ ಹೇಳುತ್ತಾರೆ: ಬಹಳ ಸಮರ್ಥ ವಿದ್ಯಾರ್ಥಿಯಾಗಿದ್ದ. ಬಹಳ ಕಿವಿಗೊಟ್ಟು ಪಾಠ ಆಲಿಸುತ್ತಿದ್ದನು. ಮುಗುಳುನಗುತ್ತಾ ಮಾತನಾಡುತ್ತಿದ್ದನು. ಅವನು ಅನ್ಯರಿಗೆ ಸಹಾಯ ಮಾಡಲು ಯಾವಾಗಲೂ ಪ್ರಯತ್ನಿಸುತ್ತಿದ್ದ. ಕ್ರಿಕೆಟ್ ಬಗ್ಗೆ ಉತ್ಸಾಹವಿತ್ತು. ಆದರೆ ಆಟ ನೋಡಲು ಅಧ್ಯಾಪಕರ ಅನುಮತಿ ಕೇಳುತ್ತಿದ್ದನು.

ಜಾಮಿಅದ ಮತ್ತೋರ್ವ ಅಧ್ಯಾಪಕ ಝುಹೀರ್ ಖಾನ್ ಸಾಹಿಬ್ ಬರೆಯುತ್ತಾರೆ: ಕಳೆದ ಎರಡು ವರ್ಷಗಳಿಂದ ರಝಾನ ಕ್ಲಾಸಿನಲ್ಲಿ ಕಲಿಸುತ್ತಿದ್ದೆ. ಅವನಿಗೆ ವಹಿಸಿಕೊಟ್ಟ ಕೆಲಸ ಬಹಳ ಕಷ್ಟಪಟ್ಟಾದರೂ ಪೂರ್ಣಗೊಳಿಸುತ್ತಿದ್ದನು. ಬೇರೆ ವಿದ್ಯಾರ್ಥಿಗಳು ಕೆಲಸ ಬಿಟ್ಟು ಹೋದರೂ ಅವನೊಬ್ಬನೇ ಆದರೂ ಅದನ್ನು ಪೂರ್ಣಗೊಳಿಸಿಯೇ ಹೋಗುತ್ತಿದ್ದನು. ಅವನು ಅನಾವಶ್ಯಕ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಪಶ್ಚಿಮ ದೇಶಗಳಲ್ಲಿ ಇಸ್ಲಾಮ್ ಮತ್ತು ಅಹ್ಮದಿಯ್ಯತ್ ವಿರುದ್ಧ ಮಾಡಲಾಗುವ ಆಕ್ಷೇಪಗಳ ಬಗ್ಗೆಯೇ ಅವನು ಪ್ರಶ್ನೆಗಳನ್ನು ಕೇಳುತ್ತಿದ್ದನು. ಅವನು ಕೆಲವು ಸಾರಿ ಹೇಳುತ್ತಿದ್ದನು: ಅಹ್ಮದಿಯೇತರ ಅಥವಾ ಮುಸ್ಲಿಮೇತರ ಸ್ನೇಹಿತರೊಂದಿಗೆ ಮಾತನಾಡಿದಾಗ ಈ ಪ್ರಶ್ನೆ ತನ್ನೊಂದಿಗೆ ಕೇಳಲಾಗಿತ್ತು ಎಂದು. ಇದರಿಂದ ತಿಳಿಯುವುದೇನೆಂದರೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ವಿರುದ್ಧ ಮಾಡುವ

ಆಕ್ಷೇಪಗಳನ್ನು ಪ್ರತಿರೋಧಿಸಲು ಅಲ್ಲಾಹನು ಅವನ ಹೃದಯದಲ್ಲಿ ಒಂದು ಜ್ಯೋತಿಯನ್ನು ಬೆಳಗಿಸಿದ್ದನು.

ಜಾಮಿಅದ ಅಧ್ಯಾಪಕ ಮಶ್‌ಹೂದ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಕಳೆದ ವರ್ಷ ಸ್ಪರ್ಧೆಗಳಲ್ಲಿ ಭಾಗವಹಿಸಲು ರಝಾ ಸಲೀಮ್ ಅಂದಾಜು ಐನೂರು ಪದ್ಯ ಚರಣಗಳನ್ನು ಬಾಯಿ ಪಾಠ ಮಾಡಿದ್ದನು. ಆಗ ಅವುಗಳ ಅರ್ಥ ಸಹ ಕಲಿತುಕೊಂಡಿದ್ದನು. ಅವನಿಗೆ ತಬ್ಲೀಗ್ ಬಗ್ಗೆ ಬಹಳ ಉತ್ಸಾಹವಿತ್ತು. ಕಳೆದ ವರ್ಷ ಅವನನ್ನು **ವಕ್ಫೆ ಆರ್‌ಝಿ**ಗೆ ಲೋವರ್ ಹ್ಯಾಂಪ್‌ಟನ್ ಜಮಾಅತಿಗೆ ಕಳುಹಿಸಲಾಗಿತ್ತು. ಅವನು ಅಲ್ಲಿ ಲೀಫ್‌ಲೆಟ್ಸ್ ಹಂಚಿದ್ದನಲ್ಲದೆ ಅಲ್ಲಿನ ಜಮಾಅತಿನೊಂದಿಗೆ ಸೇರಿ ತಬ್ಲೀಗೀ ಸ್ಟಾಲ್ ಸಹ ರಚಿಸಿದ್ದನು. ಅಲ್ಲಿ ಅವನು ಒಬ್ಬ ಕ್ರೈಸ್ತನನ್ನು ಭೇಟಿಯಾದನು. ಆ ಕ್ರೈಸ್ತನೊಂದಿಗೆ ಹಝ್ರತ್ ಈಸಾ ಮಸೀಹ್[ಅ] ಶಿಲುಬೆಯಲ್ಲಿ ಮೃತರಾಗದೆ, ಅದರಿಂದ ರಕ್ಷಿಸಲ್ಪಟ್ಟು ಕಾಶ್ಮೀರಕ್ಕೆ ಹೋದ ಬಗ್ಗೆ ವಿವರಿಸಿದಾಗ ಆತ ಆಶ್ಚರ್ಯ ಗೊಂಡಿದ್ದನು.

ಜಾಮಿಅದ ಇನ್ನೊಬ್ಬ ಅಧ್ಯಾಪಕ ಮನ್‌ಸೂರ್ ಝಿಯಾ ಸಾಹಿಬ್ ಬರೆಯುತ್ತಾರೆ: ಸಲೀಮ್ ರಝಾನ ನರನಾಡಿಗಳಲ್ಲಿ ಖಿಲಾಫತ್ ಬಗ್ಗೆ ಪ್ರೀತಿ ಮತ್ತು ಅಭಿಮಾನ ತುಂಬಿಸಲಾಗಿತ್ತು. ನಾನು ಖುತ್‌ಬದ ಬಗ್ಗೆ ಪ್ರಶ್ನೆ ಕೇಳುವಾಗ ಅವನಿಗೆ ಅನೇಕ ವಿಷಯಗಳು ನೆನಪಿನಲ್ಲಿವೆ ಎಂದು ನನಗೆ ತಿಳಿಯುತ್ತಿತ್ತು. ಅವನು ಬಹಳ ಶ್ರದ್ಧೆಯಿಂದ ಜುಮುಅ ಖುತ್‌ಬ ಆಲಿಸುತ್ತಿದ್ದನು.

ಈ ರೀತಿ ಜನರು ನನಗೆ ಅಸಂಖ್ಯಾತ ವಿಷಯಗಳನ್ನು ಬರೆದಿದ್ದಾರೆ. ಅಲ್ಲಾಹನು ಮೃತನ ಆಧ್ಯಾತ್ಮಿಕ ಪದವಿ ಉನ್ನತಗೊಳಿಸಲಿ. ತನಗೆ ಪ್ರಿಯರಾದವರ ಪಾದಗಳ ಸಮೀಪ ಸ್ಥಳ ನೀಡಲಿ. ಆ ಬಾಲಕ ಜಾಮಿಅದ ವಿದ್ಯಾಭ್ಯಾಸ ಪೂರ್ಣಗೊಳಿಸುವ ಮೊದಲೇ ಅತ್ಯುತ್ತಮ ಮುರಬ್ಬಿ ಮತ್ತು ಅತ್ಯುತ್ತಮ ಮುಬಲ್ಲಿಗ್ ಆಗಿದ್ದನು. ಖಿಲಾಫತ್ ಬಗ್ಗೆ ಅತ್ಯಂತ ಅಭಿಮಾನ ಹೊಂದಿದವನಾಗಿದ್ದನು. ಲೋಕದಲ್ಲಿರುವ ನಮ್ಮ ಎಲ್ಲ ಜಾಮಿಅಗಳ ವಿದ್ಯಾರ್ಥಿಗಳಿಗೆ ಅಲ್ಲಾಹನು ಈ ಭಾಗ್ಯ ದಯಪಾಲಿಸಲಿ. ಅವರು ಸಹ ಅನುಸರಣೆ ಮತ್ತು ನಿಷ್ಠೆಯಲ್ಲಿ ವರ್ಧಿಸುವವರಾಗಲಿ. ಅವರು ತಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗಲಿ. ಮೃತನ ಸ್ನೇಹಿತರು ಮೃತನ ಸದ್ಗುಣಗಳನ್ನು ವಿವರಿಸಿದರೆ ಮಾತ್ರ ಸಾಕಾಗಲಾರದು. ಅವರು ತಮ್ಮ ಸ್ನೇಹವನ್ನು ಹೇಗೆ ಪ್ರಕಟಿಸಬೇಕೆಂದರೆ ಅವರು ತಮ್ಮ ಸ್ನೇಹಿತನ ಸದ್ಗುಣಗಳನ್ನು ಸ್ವಯಂ ಅಳವಡಿಸಿಕೊಳ್ಳಬೇಕು ಮತ್ತು ತಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಧರ್ಮದ ಸೇವೆಗೋಸ್ಕರ ಉಪಯೋಗಿಸಬೇಕು. ಹಾಗೆ ನನಗೆ ಮತ್ತು ಮುಂದೆ ಬರಲಿರುವ ಖಲೀಫರಿಗೆಲ್ಲಾ ಅತ್ಯುತ್ತಮ ಸಹಾಯಕರು ಮತ್ತು **ಸುಲ್ತಾನೆ ನಸೀರ್** ಯಾವಾಗಲೂ ದೊರಕುವಂತೆ ಆಗಲಿ. ಮೃತನ ತಂದೆ ತಾಯಂದಿರ ಮತ್ತು ಸಹೋದರ ಸಹೋದರಿಯರ ಹೃದಯಗಳಿಗೆ ಶಾಂತಿಯನ್ನು ಅಲ್ಲಾಹನು ದಯಪಾಲಿಸಲಿ. ಅಲ್ಲಾಹನ ಇಚ್ಛೆಯ ಬಗ್ಗೆ ಸಹನೆ ದೋರುತ್ತಾ ತಮ್ಮ ತೃಪ್ತಿಯನ್ನು ಪ್ರಕಟಿಸಿದ ಅವರು ಯಾವಾಗಲೂ ಅದರಲ್ಲಿ ನೆಲೆನಿಲ್ಲಲಿ. ಅವರು ಅಲ್ಲಾಹನ ಅನುಗ್ರಹ ಗಳಿಸುವವರಾಗಲಿ. ಮುಂದೆ ಎಲ್ಲ ರೀತಿಯ ಪರೀಕ್ಷೆಗಳಿಂದಲೂ ಕಷ್ಟದಿಂದಲೂ ಅಲ್ಲಾಹನು ಅವರನ್ನು ರಕ್ಷಿಸಲಿ – ಆಮೀನ್.

(ಹುಝೂರ್ ಹೇಳಿದರು: ಜುಮುಅ ನಮಾಝ್ ನಂತರ ಜನಾಝ ನಮಾಝ್ ಹಾಝಿರ್ ಮಸ್‌ಜಿದ್‌ನಿಂದ ಹೊರಗೆ ಹೋಗಿ ನಾನು ಅನುಷ್ಠಿಸುವೆನು. ಸ್ನೇಹಿತರು ಇಲ್ಲೆಯೇ ತಮ್ಮ ಸಾಲುಗಳನ್ನು ಸರಿಪಡಿಸಿಕೊಂಡು ನಮಾಝ್‌ನಲ್ಲಿ ನನ್ನೊಂದಿಗೆ ಸೇರಿಕೊಳ್ಳಿರಿ).

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 16-09-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon